

ಸತ್ಯಭಾಮ ಅವರ ಆತ್ಮಗೌರವವನ್ನೂ, ಇಡಿಗಾಳಿನಂತೆ ಕೂಡಿ ಬಾಳಿದ ದಾಂಪತ್ಯದ ಸಫಲತೆಯನ್ನೂ ಹೇಳುತ್ತದೆ. ಸುಪ್ರಸಿದ್ಧ ಬರಹಗಾರನ ಹಿಂದೆ ನಿಂತ ಹೆಣ್ಣಿನ ಚಿತ್ರಕ್ಕೆ ಬದಲಾಗಿ ಜೊತೆಗೆ ನಿಂತ ಆತ್ಮಘನತೆಯ ಹೆಣ್ಣಿನ ನಿರೂಪಣೆ ಇದು.

◆ **ನೀವು ಮೇಷ್ಟ್ರನ್ನ ಮದುವೆಯಾಗುವ ಹೊತ್ತಿಗಾಗಲೇ ಅವರ ಬರವಣಿಗೆ ಆರಂಭವಾಗಿತ್ತೆ? ಯಾವ ವಯಸ್ಸಿನಲ್ಲಿ ನಿಮ್ಮ ಮದುವೆಯಾಗಿದ್ದು?**

ಹೌದೌದು... ಆಗಲೇ ನಮ್ಮೂರಲ್ಲೆಲ್ಲ ಇವನು ಬರೀತಾನಂತೆ ಅಂತ ಹೆಸರಾಗಿದ್ರು. ಇದನ್ನೆಲ್ಲ ಕೇಳಿ ಬಹಳ ಸಂತೋಷ ಆಗ್ತಿತ್ತು. ನನಗೆ ಮದುವೆ ನಿಶ್ಚಯ ಆದಾಗ ನಾನು ಏಳನೇ ಕ್ಲಾಸ್ ಓದ್ತಾ ಇದ್ದೆ. 1958ರಲ್ಲಿ ನಿಶ್ಚಯವಾಗಿದ್ದು. 1964ರಲ್ಲಿ ನಮ್ಮ ಮದುವೆ ಆದದ್ದು.

◆ **ಓ... ಆ ಆರು ವರ್ಷಗಳ ಕಾಯುವಿಕೆ ಹೇಗಿತ್ತು?**

ಇವರು ಊರಿಗೆ ಬಂದ್ರೆ ಬಹಳ ಸಂತೋಷ ಆಗ್ತಿತ್ತು. ಆದರೆ ಮಾತಾಡೋಕೆ ಅವಕಾಶ ಇರ್ತಾ ಇರಲಿಲ್ಲ. ಕೂಡು ಕುಟುಂಬ. ಅದರ ಜೊತೆಗೆ ಅವರ ಅಕ್ಕಂದಿರಿಗೆ ಇವರು ನನ್ನನ್ನ ನೋಡಿ ಮಾತಾಡಿದರೆ, ಅವರ ವಿದ್ಯಾಭ್ಯಾಸ ಹಾಳಾಗುತ್ತೆ ಅನ್ನೋ ಭಯ ಬೇರೆ ಇತ್ತು. ಹೀಗಾಗಿ ನನ್ನನ್ನ ಅಡಗಿಸಿ ಇಡ್ತಾ ಇದ್ರು ನೋಡಿ. (ನಗು) ಆದರೂ ಇವರು ಊರಿಗೆ ಹೋಗೋ ದಿನ ಸ್ಕೂಲು ತಪ್ಪಿಸಿ ಬಸ್ ಸ್ಟ್ಯಾಂಡ್ ಗೆ ಹೋಗ್ತಿದ್ದೆ. 'ಮಾಮಾ, ಹೋಗಿ ಬರ್ತೀರಿ' ಅಂತ ಬೀಳ್ಕೊಡ್ತಾ ಇದ್ದೆ (ಆಗ ಅವರನ್ನ ನಾನು ಮಾಮಾ ಅಂತಾನೆ ಕರೀತಿದ್ದೆ).

◆ **ಓ... ಬಹಳ ರೊಮ್ಯಾಂಟಿಕ್ ನೀವು ಹಾಗಿದ್ರೆ...**

(ನಗು) ಆದರೆ ಇವರು ಮಾತ್ರ ಬಹಳ ಗಂಭೀರ. ಹೂಂ ಉಹೂಂ... ಇಷ್ಟೇ ಮಾತಾಡ್ತಾ ಇದ್ದದ್ದು. ಇವರ ಅಕ್ಕಂದಿರಿಗೆ ಈ ಮದುವೆಯೂ ಅಷ್ಟು ಇಷ್ಟ ಇರಲಿಲ್ಲ. ಕೊನೆಗೆ ಭೂಸನೂರುಮಠರು ಒಮ್ಮೆ ನನ್ನನ್ನು ನೋಡಬೇಕಂತ ಅಪೇಕ್ಷೆ ಪಟ್ರು. ನನ್ನನ್ನ ಕರೆಸಿಕೊಂಡು ನೋಡಿ, 'ಈ ಹುಡುಗೀನ್ನ ಮದುವೆ ಮಾಡ್ಕೋ' ಅಂತಾ ಹೇಳಿದ್ರು. ಇವರು ಮಾತ್ರ, ಬಹಳ ಗಟ್ಟಿಯಾಗಿ ನಿಂತಿದ್ರು, ಈ ವಿಷಯದಲ್ಲಿ. 'ನಿನ್ನನ್ನೇ ನಾನು ಮದುವೆಯಾಗೋದು. ಬೇಕಾದ್ರೆ, ರಿಜಿಸ್ಟರ್ ಮದುವೆ ಮಾಡ್ಕೋತೀನಿ, ನಿಮ್ಮ ಮನೆಯಾಗೆ ಒಪ್ತಾರೇನು' ಅಂತ ಹೇಳಿದ್ರು.

◆ **ಒಂದು ರೀತೀಲಿ ನಿಮ್ಮದು 'ಪ್ರೇಮ ವಿವಾಹವೇ' ಹಾಗಿದ್ರೆ. ಎಷ್ಟು ದಿನದ ಮದುವೆ ನಿಮ್ಮದು? ಏನೆಲ್ಲ ನೆನಪುಗಳು?**

ನಮ್ಮ ಮದುವೆ ಕಷ್ಟದಲ್ಲೇ ಆದದ್ದು. ಒಂದು ದೇವಸ್ಥಾನದಲ್ಲಿ ಸರಳವಾಗಿ ನಮ್ಮ ಮದುವೆ ಆಯ್ತು.

**ನಾನು ಹುಟ್ಟಿದಾಗ ಇವರು ನನ್ನನ್ನ ನೋಡೋಕ ಬಂದಿದ್ರಂತ. ಮಲಗಿದ್ದ ಮುದ್ದಾದ ಮಗು ನೋಡಿ ಅನ್ಕೊಂಡ್ರಂತ, 'ಮದುವ್ಯಾದರ ಇಂಥ ಚೆಂದನ್ನ ಚೆಲುವಿನಾ ಆಗಬೇಕು' ಅಂತ.**